**<u>ಸಾಕ್ಷಿಗೆ ದಿನಾಂಕ 06-03-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: *2* ನೇ ಎದುರುದಾರರ ಪರ ಶ್ರೀ. ಕೆ ಎಂ ಆರ್ ವಕೀಲರಿಂದ:</u>**

1. ನಾನು ಆಯುಷ್ ಇಲಾಖೆಯಲ್ಲಿ ಮುಖ್ಯ ಯೋಜನೆ ಮತ್ತು ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ಹಿಸುತ್ತಿದ್ದೇನೆ. ಈಗಲೂ ಅದೇ ಹುದ್ದೆಯಲ್ಲಿ ಮುಂದುವರೆದಿದ್ದು, ಆದರೆ ಈಗ ತುಮಕೂರಿಗೆ ವರ್ಗಾವಣೆಯಾಗಿರುತ್ತೇನೆ. ನನ್ನ ವೇತನದಲ್ಲಿ ಹೆಚ್ಚಳವಾಗಿದೆ ಎಂದರೆ ನನ್ನ ತುಟ್ಟಿಭತ್ಯೆ ಹೆಚ್ಚಾಳವಾಗಿದೆ, ಆದರೆ ಮನೆಬಾಡಿಗೆ ಭತ್ಯೆ ಕಡಿಮೆಯಾಗಿರುತ್ತದೆ. ಬೆಂಗಳೂರಿನಲ್ಲಿ ಸರ್ಕಾರಿ ನೌಕರರಿಗೆ ಸಿಗುವ ಮನೆಬಾಡಿಗೆ ಭತ್ಯೆಗೂ ಮತ್ತು ತುಮಕೂರು ನಗರಕ್ಕೆ ಸರ್ಕಾರಿ ನೌಕರರಿಗೆ ಸಿಗುವ ಮನೆ ಬಾಡಿಗೆ ಭತ್ಯೆಗೂ ಸರ್ಕಾರಿ ಆದೇಶದ ಪ್ರಕಾರ ವ್ಯತ್ಯಾಸವಿದೆ ಎಂದರೆ ಸರಿ. ಅಪಘಾತದ ನಂತರ 45 ದಿನಗಳ ಕಾಲ ಗಳಿಕೆ ರಜೆ ಪಡೆದಿರುತ್ತೇನೆ. ಅದಕ್ಕೆ ಸಂಭದಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು 45 ದಿನಗಳ ಕಾಲ ಗಳಿಕೆ ರಜೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗಳಿಕೆ ರಜೆಗಳನ್ನು ಪಡೆದುಕೊಂಡ ನಂತರ ಮರಳಿ ಸೇವೆಗೆ ದೈಹಿಕ ಸಧೃಡತೆ ಪ್ರಮಾಣಪತ್ರ ನೀಡಿ ಹಾಜರಾಗಿರುತ್ತೇನೆ ಎಂದರೆ ಸರಿ. ಈ ಅಪಘಾತದಿಂದ ನನ್ನ ನೌಕರಿಗಾಗಲೀ ಅಥವಾ ವೇತನಕ್ಕಾಗಲೀ ತೊಂದರೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಾರ್ಯಚಟುವಟಿಕೆ ಮಾಡಲು ತೊಂದರೆ ಆಗುತ್ತದೆ ಎಂದು ನುಡಿಯುತ್ತಾರೆ.

2. ನಮ್ಮ ಇಲಾಖೆಯಲ್ಲಿ ವೈದ್ಯಕೀಯ ಮರುಪಾವತಿ ಸೌಲಭ್ಯವಿದೆ ಎಂದರೆ ಸರಿ. ಅಪೋಲೋ ಆಸ್ಪತ್ರೆಯಲ್ಲಿ ಸರ್ಕಾರಿ ನೌಕರರಿಗೆ ನಗದು ರಹಿತ ಚಿಕಿತ್ಸಾ ಸೌಲಭ್ಯವಿದೆ ಎಂದರೆ ಸರಿಯಲ್ಲ. ನಿಪಿ.14 ರಲ್ಲಿ ಕಾಣಿಸಿರುವ ವೈದ್ಯಕೀಯ ಬಿಲ್ಲನ್ನು ನಾನು ನನ್ನ ಇಲಾಖೆಯಿಂದ ಮರುಪಾವತಿ ಮಾಡಿಕೊಂಡಿಲ್ಲ ಕಾರಣ ನಾನು ಅಪಘಾತ ಪರಿಹಾರ ಅರ್ಜಿ ಸಲ್ಲಿಸಿರುವುದರಿಂದ ಮತ್ತು ವೈದ್ಯಕೀಯ ಬಿಲ್ಲುಗಳನ್ನು ಸಂಪೂರ್ಣವಾಗಿ ಮರುಪಾವತಿ ಮಾಡುವ ಸಾಧ್ಯತಗಳು ಕಡಿಮೆ ಇರುವುದರಿಂದ ಮರುಪಾವತಿ

ಮಾಡಿಕೊಂಡಿರುವುದಿಲ್ಲ. ನಾನು ಎ-ಶ್ರೇಣಿಯ ಅಧಿಕಾರಿಯಾಗಿರುತ್ತೇನೆ. ಸದರಿ ಶ್ರೇಣಿಯ ಅಧಿಕಾರಿಗಳಿಗೆ ಯಾವುದೇ ವೈದ್ಯಕೀಯ ಮರುಪಾವತಿಗಾಗಿ ನಿರ್ಭಂಧಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನು ಸ್ವತಃ ಸಂಬಳ ಬಟವಾಡೆ ಮಾಡುವ ಅಧಿಕಾರಿಯಾಗಿರಲಿಲ್ಲ.

3. ನಿಪಿ.14 ರ ವೈದ್ಯಕೀಯ ಬಿಲ್ಲುಗಳನ್ನು ಮರುಪಾವತಿ ಮಾಡಿಕೊಂಡಿಲ್ಲವೆಂದು ಪತ್ರ ಹಾಜರುಪಡಿಸುತ್ತೇನೆ. ನಿಪಿ.14 ಅಂತಿಮ ವೈದ್ಯಕೀಯ ಬಿಲ್ಲು ಅಲ್ಲ ಎಂದರೆ ಸರಿ. ನಿಪಿ.14 ಮೂಲ ಬಿಲ್ಲು ಅಲ್ಲ ಅದು ದ್ವಿಪ್ರತಿ ಬಿಲ್ಲು ಎಂದರೆ ಸರಿಯಲ್ಲ. ನಿಪಿ.14 ಸೃಷ್ಟಿತ ಬಿಲ್ಲು ಎಂದರೆ ಸರಿಯಲ್ಲ. ಅಪಘಾತವಾದ 2 ದಿನ ತಡವಾಗಿ ದೂರು ನೀಡಲಾಗಿದೆ ಎಂದರೆ ಸರಿ. ಅಪಘಾತದ ದಿನ ನಾನು ದ್ವಿಚಕ್ರ ವಾಹನದ ಮೇಲೆ ಶೇಷಾದ್ರಿಪುರಂ ನಿಂದ ಮನೆ ಕಡೆಗೆ ಹೋಗುತ್ತಿದ್ದೆ. ದೂರ ತಡವಾಗಿ ನೀಡಲು ಕಾರಣವೇನೆಂದರೆ ಚಳಿಗಾಲದ ಅಧಿವೇಶನಕ್ಕೆ ಹಾಜರಾಗಬೇಕಾಗಿರುವುದರಿಂದ ತಡವಾಗಿರುತ್ತದೆ. ನನ್ನನ್ನು ಪ್ರಭಾರವಾಗಿ ನೇಮಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

4. ಸ್ವಸ್ತಿಕ್ ವೃತ್ತದಲ್ಲಿ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿರುತ್ತದೆ ಎಂದರೆ ಸರಿ. ನಾನು ಆನಂದ್ ರಾವ್ ಸರ್ಕಲ್ ನಿಂದ ಶೇಷಾದ್ರಿಪುರಂ 1 ನೇ ಮುಖ್ಯ ರಸ್ತೆಯ ಮುಖಾಂತರ ಮನೆಗೆ ಹೋಗುತ್ತಿದ್ದೆ. ಸದರಿ ರಸ್ತೆಯಲ್ಲಿ ಯಾವುದೇ ವಾಹನ ಗಂಟೆಗೆ 20 ಕಿ.ಮೀ. ಗಿಂತ ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿ. ಒಂದನೇ ಎದುರುದಾರರ ವಾಹನದ ಸವಾರನು ಸಹ ದ್ವಿಚಕ್ರ ವಾಹನವನ್ನು ನಿಧಾನವಾಗಿ ಚಾಲನೇ ಮಾಡುತ್ತಿದ್ದ ಎಂದರೆ ಸಿಗ್ನಲ್ ಮುಕ್ತಾಯಗೊಳ್ಳುತ್ತದೆ ಎಂದು ವೇಗದಿಂದ ಬರುತ್ತಿದ್ದನು. ಸದರಿ ವಿಚಾರವನ್ನು ಪೊಲೀಸರ ಮುಂದೆ ನಾನು ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ.

5. ನನ್ನ ವಾಹನ ಮತ್ತು ಒಂದನೇ ಎದುರುದಾರರ ವಾಹನಗಳ ಮುಂಭಾಗ ಜಖಂಗಳು ಉಂಟಾಗಿವೆ ಎಂದರೆ ನನ್ನ ವಾಹನಕ್ಕೆ ಜಾಸ್ತಿ ಜಖಂಗಳು ಆಗಿವೆ. ನನ್ನ ವಾಹನಕ್ಕೆ ಆಗಿರುವ ಜಖಂಗಳು

ನೋಡಿದರೆ ನಾನೇ ಅತೀವೇಗ ಹಾಗೂ ನಿಶ್ಕಳಜಿತನನಿಂದ ಚಾಲನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಚಾಲನಾ ಪರವಾನಗಿ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅಪಘಾತದಿಂದ ನನ್ನ ಎರಡು ಕಾಲುಗಳಿಗೆ ಮೂಳೆಮುರಿತಗಳು ಉಂಟಾಗಿರುತ್ತವೆ. ಅಪಘಾತದ ದಿನ ನಾನು ಹೆಲ್ಮೆಟ್ ಧರಿಸದೇ ಚಳಿಗಾಲದ ಅಧಿವೇಶನಕ್ಕೆ ಹೋಗುವ ಭರದಲ್ಲಿ ದ್ವಿಚಕ್ರ ವಾಹನವನ್ನು ಅತೀವೇಗ ಮತ್ತು ಅಜಾಗರೂಕತಯಿಂದ ಚಲಾಯಿಸಿ ಅಪಘಾತಪಡಿಸಿದ್ದರೂ ಸಹ ನನ್ನ ಹುದ್ದೆಯ ಪ್ರಭಾವನವನ್ನು ಬಳಸಿ ಒಂದನೇ ಎದುರುದಾರರ ವಾಹನದ ಸವಾರನ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

6. ನಾನು ಆಯುರ್ವೇದಿಕ್ ಪಂಚಕರ್ಮ ಚಿಕಿತ್ಸೆ ಪಡೆದಿರುತ್ತೇನೆ. ನಿಪಿ.14 ರ ಕ್ರಮ ಸಂಖ್ಯೆ 27 ರಿಂದ 30 ಗಳು ಇನ್ವಾಯಿಸ್ ಗಳು ಎಂದರೆ ಸರಿ. ಸದರಿ ಇನ್ವಾಯಿಸ್ ಗಳ ಹಣ ಪಾವತಿ ರಶೀದಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಪಡೆದಿರುವ ಪಂಚಕರ್ಮ, ಲೇಪಾ, ತೈಲಾಧಾರ ಚಿಕಿತ್ಸೆಗೆ ಸರ್ಕಾರಿ ವೆಚ್ಚ ಎಷ್ಟಾಗುತ್ತದೆ ಎಂದು ಕೇಳಿ ಹೇಳಬೇಕಾಗುತ್ತದೆ. ಲೇಪಾ ಚಿಕಿತ್ಸೆಯು ಮೂಳೆಮುರಿತ ಕೂಡಲು ನೀಡುವ ಚಿಕಿತ್ಸೆಯಾಗಿರುತ್ತದೆ. ಅಪೋಲೋ ಆಸ್ಪತ್ರೆಯಿಂದ ಬಿಡುಗಡೆಯಾದ 6 ವಾರಗಳಲ್ಲಿ ಮೂಳೆಮುರಿತ ಕೂಡಿಕೊಳ್ಳುತ್ತದೆ ಎಂದರೆ ನನ್ನ ಪ್ರಕರಣದಲ್ಲಿ ಮೂಳೆಮುರಿತ ಕೂಡಿಕೊಂಡಿರಲಿಲ್ಲ. ದಿಃ25.05.2025 ರಂದು ಮೂಳೆಮುರಿತ ವಕ್ರವಾಗಿ ಕೂಡಿಕೊಂಡಿದೆ ಎಂದರೆ ಸರಿ. ಇವತ್ತಿನವರೆಗೂ ಮೂಳೆಮುರಿತ ವಕ್ರವಾಗಿ ಕೂಡಿಕೊಂಡಿರುತ್ತದೆ ಎಂದರೆ ಸರಿ.

7. ಆಯುರ್ವೇದಿಕ್ ಚಿಕಿತ್ಸೆ ಪಡೆಯಲು ವೈದ್ಯರ ಸಲಹೆ ಇತ್ತಾ ಎಂದರೆ ಚಿಕಿತ್ಸೆ ನೀಡಿದ ವೈದ್ಯರು ಸಲಹೆ ನೀಡಿದ್ದು ಮತ್ತು ನಾನು ಸ್ವತಃ ವೈದ್ಯನಾಗಿರುವುರಿಂದ ಚಿಕಿತ್ಸೆ ಪಡೆದಿರುತ್ತೇನೆ. ಲೇಪಾ ಚಿಕಿತ್ಸೆಯು ಪ್ರೋಟೀನ ಪೂರೈಕೆಯ ಚಿಕಿತ್ಸೆನಾ ಎಂದರೆ ಚರ್ಮದ ಮೇಲ್ಭಾಗಕ್ಕೆ ಔಷಧಿಗಳನ್ನು ಹಚ್ಚಲಾಗುವ ಪ್ರಕ್ರಿಯೆ. ನನಗೆ ತೆರೆದ ಗಾಯಗಳು ಇರಲಿಲ್ಲ. ಲೇಪಾ ಚಿಕಿತ್ಸೆಯು ಚರ್ಮದ ಪದರಕ್ಕೆ ನೀಡಲಾಗುವ ಚಿಕಿತ್ಸೆ ಎಂದರೆ ಸರಿ. ಲೇಪಾ ಚಿಕಿತ್ಸೆಗೂ ಮತ್ತು ಮೂಳೆಮುರಿತ ವಕ್ರತೆಯಿಂದ

ಕೂಡಿರುವುದಕ್ಕೆ ಸಂಬಂಧವಿಲ್ಲ ಎಂದರೆ ಸಂಧಾನೀಯಗಣ ದ್ರವ್ಯ ಚಿಕಿತ್ಸೆಯಾಗಿರುತ್ತದೆ. ನನಗೆ ಲೇಪಾ ಚಿಕಿತ್ಸೆ ಮತ್ತು ತೈಲಾಧಾರ ಚಿಕಿತ್ಸೆಗಳು ಅವಶ್ಯಕತೆ ಇಲ್ಲದೇ ಇದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸದರಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಲೇಪಾ ಚಿಕಿತ್ಸೆ ಮತ್ತು ತೈಲಾಧಾರ ಚಿಕಿತ್ಸೆಗಳು ಪಾರ್ಶ್ವವಾಯು ರೋಗಕ್ಕೆ ನೀಡಲಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೂಳೆಬೆಸೆದುಕೊಳ್ಳಲು ಸಹ ಚಿಕಿತ್ಸೆ ನೀಡುತ್ತಾರೆ ಎಂದು ನುಡಿಯುತ್ತಾರೆ.

8. ಅಪೋಲೋ ಆಸ್ಪತ್ರೆಯಲ್ಲಿ ಮೂಳೆಶಕ್ತಿ ವರ್ಧನೆಗೆ ಮತ್ತು ಮೂಳೆ ಬೆಸೆದುಕೊಳ್ಳಲು ಎರಡಕ್ಕೂ ಸಹ ಔಷಧಿ ನೀಡಿದ್ದರು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳು ನನಗೆ ಉಂಟಾದ ಗಾಯಗಳಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನನಗೆ ಉಂಟಾಗಿರುವ ಗಾಯಗಳು ವಾಸಿಯಾಗಿವೆ ಎಂದರೆ ಸರಿಯಲ್ಲ. ನಾನು ಹೊಂದಿರುವ ಹುದ್ದೆ ಮತ್ತು ಸರ್ಕಾರದಿಂದ ನೌಕರರಿಗೆ ಆರೋಗ್ಯ ಸಂಜೀವಿನಿ ಯೋಜನೆ ಇರುವುದರಿಂದ, ನನ್ನ ಮುಂದುವರೆದ ಚಿಕಿತ್ಸಾ ವೆಚ್ಚಕ್ಕೆ ರೂ.2,00,000/- ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾಪ್ರಮಾಣಪತ್ರದಲ್ಲಿ ಹೇಳಿದಂತೆ ನನ್ನ ವಯಸ್ಸು, ಆದಾಯ ಮತ್ತು ಹುದ್ದೆ ಗಳನ್ನು ದೃಢಪಡಿಸುವ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ *1* ನೇ ಎದುರುದಾರರ ಪರ ಶ್ರೀ.ಎ.ವಿ.ಹೆಚ್. ವಕೀಲರು ಶ್ರೀ ಆರ್ ಬಿ ಸಿ ವಕೀಲರ ಪರವಾಗಿಃ**

1. ಈ ಅಪಘಾತವು ನನ್ನ ತಪ್ಪಿನಿಂದ ಆಗಿದ್ದೂ ಒಂದನೇ ಎದುರುದಾರರ ವಾಹನದ ಸವಾರನ ತಪ್ಪಿನಿಂದ ಉಂಟಾಗಿಲ್ಲ ಎಂದರೆ ಸರಿಯಲ್ಲ. ಒಂದನೇ ಎದುರದಾರರ ವಿರುದ್ಧ ಸುಳ್ಳು ಪರಿಹಾರ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಎರಡನೇ ಎದುರುದಾರರಾದ ವಿಮಾ ಕಂಪನಿಯಿಂದ ಮಾತ್ರ ಪರಿಹಾರ ಪಡೆಯಲು ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು 1 ಮತ್ತು 2 ನೇ ಎದುರುದಾರರಿಂದ ಪರಿಹಾರ ಪಡೆಯಲು ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**